## RCS ಚಾಟ್

**Jibe Mobile Ltd. ("Jibe Mobile")**
70 Sir John Rogerson's Quay, Dublin 2, Ireland
https://support.google.com/

16 ಮಾರ್ಚ್ 2023 ರಂದು ಅಪ್‌ಡೇಟ್ ಮಾಡಲಾಗಿದೆ
ಹಿಂದಿನ ಆವೃತ್ತಿ: 21 ಡಿಸೆಂಬರ್ 2020

ಒಪ್ಪಂದದ ಸಾರಾಂಶ

- ಈ ಒಪ್ಪಂದದ ಸಾರಾಂಶವು EU ಕಾನೂನಿನ ಅವಶ್ಯಕತೆಗೆ ಅನುಗುಣವಾಗಿ ನಮ್ಮ ಸೇವಾ ಆಫರ್‌ನ ಮುಖ್ಯ ಅಂಶಗಳನ್ನು ವಿವರಿಸುತ್ತದೆ[1].
- ಸೇವಾ ಆಫರ್‌ಗಳನ್ನು ಹೋಲಿಸಿ ನೋಡಲು ನಿಮಗೆ ಸಹಾಯ ಮಾಡುವುದು ಇದರ ಉದ್ದೇಶವಾಗಿದೆ.
- ನಿಮ್ಮ ಸೇವಾ ಆಫರ್ ಕುರಿತಾದ ಸಂಪೂರ್ಣ ಮಾಹಿತಿಯು ಇತರ ಡಾಕ್ಯುಮೆಂಟ್‌ಗಳಲ್ಲಿ ಲಭ್ಯವಿದೆ.

ಸೇವೆಗಳು
RCS ಚಾಟ್ Messages by Google ಬಳಕೆದಾರರಿಗಾಗಿ ಅಪ್‌ಗ್ರೇಡ್ ಮಾಡಿದ, ಸಮೃದ್ಧ ಸಂದೇಶ ಕಳುಹಿಸುವಿಕೆಯ ಅನುಭವವನ್ನು ಒದಗಿಸುತ್ತದೆ. RCS ಚಾಟ್ ಸಂದೇಶಗಳನ್ನು ಕಳುಹಿಸಲು ಇಂಟರ್ನೆಟ್ ಸಂಪರ್ಕದ ಅಗತ್ಯವಿದೆ. RCS ಚಾಟ್ ಅನ್ನು Jibe Mobile ಮೂಲಕ, ಸಮಂಜಸವಾದ ಕೌಶಲ್ಯ ಮತ್ತು ಕಾಳಜಿಯನ್ನು ಬಳಸಿ ಒದಗಿಸಲಾಗಿದ್ದು, ಯಾವುದೇ ಕನಿಷ್ಠ ಮಟ್ಟದ ಸೇವಾ ಗುಣಮಟ್ಟವನ್ನು ಖಾತ್ರಿಪಡಿಸಲಾಗುವುದಿಲ್ಲ.

ಬೆಲೆ
RCS ಚಾಟ್ ಅನ್ನು ಯಾವುದೇ ವೆಚ್ಚವಿಲ್ಲದೇ ಒದಗಿಸಲಾಗುತ್ತದೆ ಮತ್ತು ಅದರ ಬಳಕೆಯು Jibe Mobile ಸೇವಾ ನಿಯಮಗಳು (https://jibe.google.com/policies/terms/ ನಲ್ಲಿ ಲಭ್ಯವಿದೆ) ಮತ್ತು Google ಸೇವಾ ನಿಯಮಗಳೊಂದಿಗಿನ (https://policies.google.com/terms ನಲ್ಲಿ ಲಭ್ಯವಿದೆ) ಅನುಸರಣೆಗೆ ಒಳಪಟ್ಟಿರುತ್ತದೆ.

ಅವಧಿ, ನವೀಕರಣ ಮತ್ತು ಕೊನೆಗೊಳಿಸುವಿಕೆ
ನೀವು ಸೈನ್ ಅಪ್ ಮಾಡಿದ ತಕ್ಷಣ ಬಳಸಲು RCS ಚಾಟ್ ಲಭ್ಯವಿದೆ. ನೀವು ನಿಶ್ಚಿತ ಅವಧಿಗಾಗಿ RCS ಚಾಟ್ ಬಳಸಲು ಬದ್ಧರಾಗಿಲ್ಲ ಮತ್ತು ಅದನ್ನು ಯಾವಾಗ ಬೇಕಾದರೂ ನಿಲ್ಲಿಸಲು ಸ್ವತಂತ್ರರಾಗಿದ್ದೀರಿ.

ವಿಕಲಚೇತನ ಅಂತಿಮ ಬಳಕೆದಾರರಿಗಾಗಿ ಫೀಚರ್‌ಗಳು
ನೀವು RCS ಚಾಟ್ ಜೊತೆಗೆ ಸ್ಕ್ರೀನ್ ರೀಡರ್ ಬಳಸಬಹುದು. ಹೆಚ್ಚಿನ ವಿವರಗಳು https://support.google.com/messages/answer/6105764?hl=en ನಲ್ಲಿ ಲಭ್ಯವಿವೆ.

ಇತರ ಸೂಕ್ತ ಮಾಹಿತಿ
ಗ್ರಾಹಕ ಬೆಂಬಲ:RCS ಚಾಟ್‌ಗೆ ಸಂಬಂಧಿಸಿದ ಸಹಾಯ ಮತ್ತು ಬೆಂಬಲ https://support.google.com/ ನಲ್ಲಿ ಲಭ್ಯವಿದೆ.
ವಿವಾದಗಳು: ನಿಮ್ಮ ದೂರನ್ನು ನೀವು https://ec.europa.eu/consumers/odr/main/?event=main.adr.show2 ನಲ್ಲಿ ಪಟ್ಟಿ ಮಾಡಲಾಗಿರುವ ಬದಲಿ ವಿವಾದ ಪರಿಹಾರ ಪೂರೈಕೆದಾರರಿಗೆ ಸಲ್ಲಿಸಬಹುದು ಅಥವಾ ನಿಮ್ಮ ದೇಶದ ಕಾನೂನು ಅವಶ್ಯಕತೆಗಳಿಗೆ ಅನುಗುಣವಾಗಿ ಮತ್ತೊಬ್ಬ ಪೂರೈಕೆದಾರರಿಗೆ ಸಲ್ಲಿಸಬಹುದು. Google ಸೇವಾ ನಿಯಮಗಳಲ್ಲಿ ಹೆಚ್ಚಿನ ವಿವರಗಳು ಲಭ್ಯವಿವೆ.
ಭದ್ರತಾ ಇನ್ಸಿಡೆಂಟ್‌ಗಳು: ಯಾವುದೇ ವಿಳಂಬವಿಲ್ಲದೆ ಭದ್ರತಾ ಮತ್ತು ಗೌಪ್ಯತಾ ಈವೆಂಟ್‌ಗಳನ್ನು ಗುರುತಿಸಲು ಮತ್ತು ಅವುಗಳಿಗೆ ಪ್ರತಿಕ್ರಿಯಿಸಲು Jibe Mobile ಕಟ್ಟುನಿಟ್ಟಿನ 24/7 ಇನ್ಸಿಡೆಂಟ್ ನಿರ್ವಹಣಾ ಕಾರ್ಯಕ್ರಮವನ್ನು ನಡೆಸುತ್ತದೆ. ನಿಮ್ಮ ಆನ್‌ಲೈನ್ ಭದ್ರತೆಯನ್ನು ನಿರ್ವಹಿಸಲು ನಿಮಗೆ ಸಹಾಯ ಮಾಡಲು Jibe Mobile ಭದ್ರತಾ ಚೆಕ್‌ಲಿಸ್ಟ್ ಒಂದನ್ನು ಒದಗಿಸುತ್ತದೆ.
ವೈಯಕ್ತಿಕ ಡೇಟಾ: RCS ಚಾಟ್‌ಗೆ ಸೈನ್ ಅಪ್ ಮಾಡಲು, ನಿಮ್ಮ ಫೋನ್ ಸಂಖ್ಯೆಯನ್ನು ಒದಗಿಸಬೇಕಾಗುತ್ತದೆ. Google ಗೌಪ್ಯತೆ ನೀತಿಯು (https://policies.google.com/privacy ನಲ್ಲಿ ಲಭ್ಯವಿದೆ) ನೀವು RCS ಚಾಟ್ ಬಳಸುವಾಗ Jibe Mobile ಸಂಗ್ರಹಿಸುವ ವೈಯಕ್ತಿಕ

---

[1] ಯುರೋಪಿಯನ್ ಸಂವಹನಾ ಕೋಡ್ (OJ L 321, 17.12.2018, p. 36) ಅನ್ನು ಕಾರ್ಯಗತಗೊಳಿಸಿದ, ಯುರೋಪಿಯನ್ ಸಂಸತ್ತು ಮತ್ತು 11 ಡಿಸೆಂಬರ್ 2018 ರ ಕೌನ್ಸಿಲ್‌ನ ನಿರ್ದೇಶನ (EU) 2018/1972 ರ ಆರ್ಟಿಕಲ್ 102(3).

ಡೇಟಾದ ಬಗ್ಗೆ ಹೆಚ್ಚಿನ ಮಾಹಿತಿ ಒದಗಿಸುತ್ತದೆ. Google ಗೌಪ್ಯತಾ ನೀತಿಯು ನಿಮ್ಮ ಮತ್ತು Jibe Mobile ನಡುವಿನ ಒಪ್ಪಂದದ ಅಥವಾ ಈ ಸಾರಾಂಶದ ಭಾಗವಾಗಿರುವುದಿಲ್ಲ.